<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿಃ ಶ್ರೀ ಓ.ಹೆಚ್.ಆರ್., ವಕೀಲರಿಂದಃ</u>

ಪ್ರ ವ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿಃ 1 ಅಂತ, ದೂರಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿಃ 2 ಅಂತ, ನನ್ನ ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿಃ 3 ಅಂತ, ಅಂತಿಮ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿಃ 4 ಅಂತ ಗುರುತಿಸಲಾಯಿತು. ಘಟನಾ ಸ್ಥಳದ ಪಂಚನಾಮೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿಃ 5 ಅಂತ, ವಾಹನ ಪರಿಶೀಲನಾ ಪಂಚನಾಮೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿಃ 6 ಅಂತ, ಐ.ಎಂ.ವಿ. ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 7 ಅಂತ ಗುರುತಿಸಲಾಯಿತು.

ಕಾವೇರಿ ಆಸ್ಪತ್ರೆ, ಬೆಂಗಳೂರು ಇವರು ನೀಡಿರುವ ಮೂಲ ಫಾರ್ಮಸಿ ಬಿಲ್ಲು ಹಾಜರುಪಡಿಸಿದ್ದು ಅದನ್ನು ನಿಪಿಃ 8 ಅಂತ ಗುರುತಿಸಲಾಯಿತು. ನಂದಿನಿ ಮೆಡಿಕಲ್ಸ್ ರವರು ನೀಡಿರುವ ಜಿ.ಎಸ್.ಟಿ. ಇನ್ವಾಯ್ಸ್ ನ್ನು ನಿಪಿಃ 9 ಅಂತ, ಅಪಘಾತದಲ್ಲಿ ಗಾಯಗೊಂಡ ನನ್ನ ಎರಡು ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 10 ಮತ್ತು 11 ಅಂತ, ಕಾವೇರಿ ಆಸ್ಪತ್ರೆ ಬೆಂಗಳೂರು ರವರು ನೀಡಿರುವ 7 ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿಃ 12 ಅಂತ ಗುರುತಿಸಲಾಯಿತು.

ಎಸ್.ಜೆ.ಎಂ. ದಂತ ಮಹಾವಿದ್ಯಾಲಯ, ಚಿತ್ರದುರ್ಗ ಇವರು ನೀಡಿರುವ ಎರಡು ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿಃ 13 ಮತ್ತು 14 ಅಂತ ಗುರುತಿಸಲಾಯಿತು. ಚಿತ್ರದುರ್ಗ ಎಸ್ ಜೆ ಎಂ ದಂತ ಮಹಾವಿದ್ಯಾಲಯ ಆಸ್ಪತ್ರೆಯ ವೈದ್ಯರಾದ ಡಾ. ಕೋದಂಡರಾಮ ಇವರು ನೀಡಿರುವ ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿಃ 15 ಅಂತ ಗುರುತಿಸಲಾಯಿತು. ಚಿತ್ರದುರ್ಗ ಎಸ್ ಜೆ ಎಂ ದಂತ ಮಹಾವಿದ್ಯಾಲಯ್ಯ ಆಸ್ಪತ್ರೆಯವರು ನೀಡಿರುವ ಓ ಪಿ ಡಿ ಕಾರ್ಡನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 16 ಅಂತ ಗುರುತಿಸಲಾಯಿತು. ಚಿತ್ರದುರ್ಗ ಎಸ್ ಜೆ ಎಂ ದಂತ ಮಹಾವಿದ್ಯಾಲಯ್ಯ ಆಸ್ಪತ್ರೆಯವರು ನೀಡಿರುವ ಎಕ್ಸ್ ರೇ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 17 ಅಂತ, ಕಾವೇರಿ ಆಸ್ಪತ್ರೆ, ಬೆಂಗಳೂರು ಇವರು ನೀಡಿರುವ ಔಷಧ ಸಲಹಾ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 18 ಅಂತ ಗುರುತಿಸಲಾಯಿತು. ಆದ್ದರಿಂದ ಅರ್ಜಿಯಲ್ಲಿ ಕಾಣಿಸಿರುವಂತೆ ಆದೇಶವಾಗಲು ಪಾರ್ಥನೆ.

(ಎದುರುದಾರರ ಪರ ವಕೀಲರು ಪಾಟೀ ಸವಾಲಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಚಳ್ಳಕೆರೆ.